“ಯಾರ್ರೀ ಅದು ಮನು?'' ಎಂದು ನನ್ನನ್ನು ಕೇಳಿದಳು. ‘‘ಅದೇ ನಮ್ ಮುಂದಿನ ಟೇಬಲ್‌ನಲ್ಲಿ ಚೆಕ್ ಮಾಡ್ತಾನಲ್ಲ ಆ ಮನೋಜ್ ಬಿಟ್ರೆ ಬೇರೆ ಯಾವ ಮನುನೂ ಇಲ್ಲಾನಿಸುತ್ತೆ” ಎಂದೆ. “ಆ ಸ್ಟುಪಿಡ್ ಅಲ್ಲಾರಿ. ‘ಬಾಲ್ಯದಲ್ಲಿ ತಂದೆ. ಯೌವನದಲ್ಲಿ ಗಂಡ. ಮುಪ್ಪಿನಲ್ಲಿ ಮಕ್ಕಳ ಆಸರೆಯಲ್ಲಿ ಇರಬೇಕಾದ ಹೆಣ್ಣು ಸ್ವತಂತ್ರವಾಗಿರಲು ಯೋಗ್ಯಳಲ್ಲ’ ಎಂದು ಒಂದಾನೊಂದು ಕಾಲದಲ್ಲಿ ಕಾನೂನು ಬರೆದೋನು. ಕಟ್ಕೊಂಡೋನು ಮಾರ್ಕೊಂಡ. ಅಷ್ಟು ಪ್ರೀತಿಸ್ತಿದ್ದ ಅಪ್ಪನಿಗೆ ಮಗ್ಳ ಮೇಲೆ ನಂಬಿಕೆಯಿಲ್ದೆ ಆತ್ಮಹತ್ಯೆ ಮಾಡ್ಕೊಂಡ. ಅಣ್ಣ ಹೆದ್ರುಸಿ ಹಾಸ್ಗೆಗೆ ಕರ್ದ. ಈಗ ನಾನೆಲ್ಲಿ ಇರ್ಬೇಕು?” ಎಂದವಳ ಮಾತಿಗೆ ನನ್ನ ಬಳಿ ಉತ್ತರವಿರಲಿಲ್ಲ. ಯಾವ ಮನು ಏನು ಬರೆದಿದ್ದಾನೆಂದು ನನಗೆ ಗೊತ್ತಿರಲಿಲ್ಲ. ಅವಳಿಗೆ ಏನೆಂದು ಉತ್ತರಿಸುವುದು. ನನ್ನ ಮೌನ ಕಂಡು ತಾನೆ ಮುಂದುವರಿದು, ‘‘ಇನ್ನು ನಿಮ್ಮ ಪ್ರಶ್ನೆ ‘ಕಂಡ ಕಂಡವರ ಬಳಿ ಸಂಬಂಧ...’ ಇಲ್ಲರೀ ಈಗ ನಂಗೆ ಯಾರತ್ರನೂ ಸಂಬಂಧವಿಲ್ಲ. ದೇಹ ಮಾರ್ಕೊಂಡು ಬದ್ಕೊ ಸ್ಥಿತಿ ಇನ್ನೂ ಬಂದಿಲ್ಲ. ನಾನು ಅಮ್ಮ ಇಬ್ರು ಪ್ರಾಮಾಣಿಕವಾಗಿ ಕೆಲ್ಸ ಮಾಡಿ ಸಂಪಾದ್ನೆ ಮಾಡ್ತೀವಿ. ಇಬ್ಬರಿಗೆ ಸಾಕಾಗುತ್ತೆ. ನಮ್ಮಿಷ್ಟಕ್ಕೆ ನಾವಿದ್ದೀವಿ. ಸರಿಯಿಲ್ಲಾಂತ ಯಾರಾದ್ರು ಅಂದ್ರೆ, ಹೌದು ನಾನು ಸರಿಯಿಲ್ಲಂತಾನೆ ಹೇಳ್ತೀನಿ. ಅಂದವರನ್ನು ನಂಬಿಸಿ ನನಗೇನು ಆಗ್ಬೇಕಿಲ್ಲ. ಇನ್ನೂ ನಾಳೆಗಳ ಬಗ್ಗೆ ಭಯನೂ ಇಲ್ಲ. ಯಾಕೆಂದರೆ ನಿನ್ನೆಯಷ್ಟು ಘೋರ, ಭೀಕರ ದಿನಗಳು ಮತ್ತೆ ಎಂದೂ ಬರಲ್ಲ ಎನ್ನುವ ನಂಬಿಕೆ. ನನ್ನ ಜೀವ್ನದಲ್ಲಿ ನಡೆಯಬೇಕಾದ್ದು ಏನು ಇಲ್ಲಾರಿ. ಇನ್ನೇನಾದ್ರೂ ನಡೆದ್ರೆ ಕೊಲೆ ಮಾತ್ರ...” ಎಂದವಳತ್ತ ನೋಡಿ ದೊಡ್ಡದೊಂದು ನಿಟ್ಟುಸಿರುಬಿಟ್ಟೆ.

ಇಂತಹ ಸುಂದರ, ಸೌಮ್ಯಮುಖದ ಹಿಂದೆ ಇಷ್ಟೊಂದು ನೋವಿದೆ ಎಂದು ನನಗೆ ಗೊತ್ತಿರಲಿಲ್ಲ. ಗೊತ್ತಿದ್ದರೆ ಖಂಡಿತಾ ಅಂತಹ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ. “ನಾಳೆಯಿಂದ ನಿಮ್ಮ ಟೇಬಲ್‌ಗೆ ನೀವು ಹೋಗಿ. ಇಷ್ಟೆ ನನ್ಕತೆ” ಎಂದು ಬಾಕ್ಸ್ ತೆಗೆದುಕೊಂಡು ಹೋಗಲು ತಯಾರಾದವಳ ಕೈ ಹಿಡಿದು, “ರಿಯಲಿ ವೆರಿ ವೆರಿ ಸ್ಸಾರಿ” ಎಂದು ನನ್ನೆದೆಯ ಭಾರವನ್ನು ಕಡಿಮೆ ಮಾಡಿಕೊಂಡೆ. ಅವಳು ಮೆಲ್ಲಗೆ ನಗುತ್ತಾ “ನಾನು ಎಂಥವಳೆಂದು ಗೊತ್ತಾಯ್ತಲ್ಲ. ಇನ್ಮುಂದೇನೂ ಮೊದ್ಲುತರನೇ ಇರ್ತೀರಾ?” ಎಂದು ಕೇಳಿದವಳಿಗೆ ‘ಇಲ್ಲ’ ಎನ್ನುವಂತೆ ತಲೆಯಲ್ಲಾಡಿಸಿದೆ. ‘ನಂಗೆ ಗೊತ್ತು’ ಎನ್ನುವಂತೆ ನೋಡಿದವಳಿಗೆ, “ಎಲ್ಲನೂ ಹೇಳ್ಕೊಂಡ್ಮೇಲೆ ಮನಸ್ಸಿಗೆ ರಿಲ್ಯಾಕ್ಸಾಗಿರ್ಬೇಕಲ್ಲ! ಇನ್ನುಂದೆ ಇನ್ನೂ ಸ್ವಲ್ಪ ಜಾಸ್ತಿ ನಗೋಣ” ಎಂದಾಗ, ಬಾರದ ನಗುವೊಂದನ್ನು ಬಲವಂತವಾಗಿ ನಕ್ಕಳು ಅವಳು.


**ಮಂಗಳಾ ಸಿ.**

ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಲೇಖಕಿಯ ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಖಾಸಗಿ ಕಂಪೆನಿಯೊಂದರಲ್ಲಿ ಗ್ರಾಫಿಕ್ ಡಿಸೈನರ್ ಆಗಿ ಕೆಲಸ ಮಾಡುತ್ತಿದ್ದಾರೆ.